ಆ ಅಭ್ಯರ್ಥಿಗಳು ದಯವಿಟ್ಟು ಲೋಕಾಯುಕ್ತಕ್ಕೆ ಒಂದು ಅರ್ಜಿಯನ್ನು ಹಾಕಬೇಕೆಂದು ಈ ಸದನದ ಮುಂಖಾಂತರವಾಗಿ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧ್ಯಕ್ಷರೆ, ೧೫ನೇ ಅಲ್ಪಕಾಲಾವಧಿ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಬಿ ರಾಚಯ್ಯ.— ಸಾರ್, ಇದರಲ್ಲಿ...

ಅಧ್ಯಕ್ಷರು.— ನಾಳೆ ಬೇಕಾದರೆ ಹೇಳಿ. ನಾಳೆ ಇಡುತ್ತೇನೆ.

ಶ್ರೀ ಬಿ. ರಾಚಯ್ಯ.— ನಾಳೆ ಹೇಳುತ್ತೇನೆ.

ಅಧ್ಯಕ್ಷರು.— ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಆರ್. ವೆಂಕಟರಾವಯ್ಯ.— ನಾನು ಒಂದು ನಿವಿಷ ಲೇಟಾಗಿ ಬಂದೆ.

ಅಧ್ಯಕ್ಷರು.— ನಾನು ಮೊದಲು ಕರೆದಾಗ ತಾವು ಅಬ್‌ಸೆಂಟ್ ಇದ್ದಿರಿ. ಪದ್ಧತಿ ಏನು ಎಂಬುದನ್ನು ಕೇಳಿ, ತಾವು ವಕೀಲರಿದ್ದೀರಿ. ಕಾಯಿದೆ ಹೇಳಿಕೊಡಬೇಕಾಗಿಲ್ಲ. ನಾನು ಹೇಳುವುದು ಕೇಳಿ. ಕ್ವಶ್ಚನ್ ಅವರ್ ೧೨ಕ್ಕೆ ಮೊದಲೇ ಮುಂಗಿದ್ದರೆ ಅಬ್ಸೆಂಟ್ ಆದವರನ್ನು ಮತ್ತೆ ಕರೆಯುವ ಪರಿಪಾಠ ಇದೆ ಈಗ ಕ್ವಶ್ಚನ್ ಅವರ್ ಮುಗಿದಿದೆ. ಮತ್ತೆ ಕರೆಯುವುದಕ್ಕೆ ಬರುವುದಿಲ್ಲ. ಕುಳಿತುಕೊಳ್ಳಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿಗಳು

ಜಮಖಂಡಿಯಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಆಂಬ್ಯುಲೆನ್ಸ್ ಮತ್ತು ಜನರೇಟರ್‌ಗಳ ಪೂರೈಕೆ

೧೫೧. ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).— ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ನಗರದಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ ಮತ್ತು ಮುಧೋಳ್ ಮಹಾಲಿಂಗಪುರ, ಬನಹಟ್ಟಿ, ತೇರದಾಳ್, ಸವಳಗಿ ಹೀಗೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸರ್ಕಾರಿ ಆಸ್ಪತ್ರೆಗಳಿರುವುದರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಎಲ್ಲ ಆಸ್ಪತ್ರೆಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳ ರೋಗಿಗಳ ಅನುಕೂಲಕ್ಕಾಗಿ ಜಮಖಂಡಿ ಸಾರ್ವಜನಿಕ ಆಸ್ಪತ್ರೆಗೆ ಒಂದು ಸುಸಜ್ಜಿತ ಆಂಬ್ಯುಲೆನ್ಸ್ ಮತ್ತು ಒಂದು ಜನರೇಟರ್‌ಗಳ ಪೂರೈಕೆಯ ಕುರಿತು ಸರ್ಕಾರದವರು ಆಲೋಚನೆ ಮಾಡಿರುವರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ಒಂದು ಆಂಬ್ಯುಲೆನ್ಸ್ ವಾಹನವನ್ನು ಮತ್ತು ಒಂದು ಜನರೇಟರನ್ನು ಒದಗಿಸಲು ಪ್ರಯತ್ನ ಮಾಡಲಾಗುವುದು.

ಮೈಸೂರಿನಲ್ಲಿರುವ ಅತಿಥಿಗಳ ವಸತಿ ಗೃಹಕ್ಕಾಗಿ ಸರಕಾರದವರು ಮಾಡಿದ ವೆಚ್ಚ ವೆಷ್ಟು

೧೫೫. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ),— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶ್ವಕನ್ನಡ ಸಮ್ಮೇಳನದ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ಕಟ್ಟಿಸಿರುವ ಅತಿಥಿಗೃಹಗಳಿಗಾಗಿ ಸರ್ಕಾರದವರು ವೆಚ್ಚಮಾಡಿದ ಹಣವೆಷ್ಟು ?

ಆ) ಈ ವಸತಿ ಗೃಹಗಳು ಈಗ ಸರ್ಕಾರದ ಯಾವ ಇಲಾಖೆಯ ಹತ್ತೋಟಿಯಲ್ಲಿದೆ ?

ಇ) ವಿಶ್ವಕನ್ನಡ ಸಮ್ಮೇಳನದ ನೆನಪಿನ ಸಂದರ್ಭಕ್ಕಾಗಿ ಸರ್ಕಾರದವರು ಮೈಸೂರಿನಲ್ಲಿ ಕನ್ನಡದ ಬಗ್ಗೆ ಅಧ್ಯಾಯನ ಸಂಸ್ಥೆಯೊಂದನ್ನು ಸ್ಥಾಪಿಸಲು ಯೋಚಿಸಿದ್ದಾರೆಯೇ ?

ಈ) ಇದಕ್ಕಾಗಿ ವಸತಿ ಗೃಹಗಳನ್ನು ವಿಸಲಾಗಿಡುವುದೇ ಇಲ್ಲವೇ ಇದನ್ನು ಪ್ರವಾಸೋದ್ಯಮ ಇಲಾಖೆಗೆ ವಹಿಸಿಕೊಡುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಡಿಸೆಂಬರ್ ೧೯೮೭ರ ಅಂತ್ಯಕ್ಕೆ ರೂ. ೯೫.೭೪ ಲಕ್ಷ.

ಆ) ಈ ವಸತಿ ಗೃಹಗಳು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಹತೋಟಿಯಲ್ಲಿದೆ.

ಇ) ಇಲ್ಲ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆರೋಗ್ಯ ಸೌಲಭ್ಯ

೪೦೩. ಶ್ರೀ ಟಿ. ಎಸ್. ಮಣಿ (ಕೆ. ಜಿ. ಎಫ್.) ಮತ್ತು ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕೆ. ಜಿ. ಎಫ್. ನ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರವರದ ಗಮನಕ್ಕೆ ಬಂದಿದೆಯೇ ?

ಆ) ಹಾಸಿಗೆಗಳ ಸಂಖ್ಯೆಯನ್ನು ಮತ್ತು ಸಿಬ್ಬಂದಿಯನ್ನು ಹೆಚ್ಚಿಸಲು ಸರ್ಕಾರ ಯಾವ ಕ್ರಮ ಗೊಂಡಿದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಅ) ಒಳ ರೋಗಿಗಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.

ಚೀಲೂರು ಆಯುರ್ವೇದ ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸುವುದು.

೪೦೧. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ)— ಮಾನ್ಯ ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಹೊನ್ನಾಳಿ ತಾಲ್ಲೂಕು ಚೀಲೂರಿನಲ್ಲಿರುವ ಆಯುರ್ವೇದ ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಘಟಕವನ್ನಾಗಿ ಪರಿವರ್ತಿಸಲು ಸರ್ಕಾರದವರು ಯೋಚಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ ಪ್ರಸಕ್ತ ವರ್ಷದಿಂದಲಾದರೂ ಮೇಲ್ಕಂಡ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬಕಾರಿ ಮಂತ್ರಿಗಳು).—

ಅ) ಶಿವಮೊಗ್ಗ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಚೀಲೂರಿನಲ್ಲಿ ಭಾರತೀಯ ವೈದ್ಯ ಪದ್ಧತ್ತಿಗಳು ಮತ್ತು ಹೋಮಿಯೋಪಥಿ ಇಲಾಖೆಗೆ ಸಂಬಂಧಪಟ್ಟ ಯಾವುದೇ ಆಯುರ್ವೇದ ಆಸ್ಪತ್ರೆ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.